ಇನ್ ಏಡ್ ತಂದು ಅವರಿಗೆ ರಾ ಮೆಟೀರಿಯಲ್ ಕೊಡುವ ವ್ಯವಸ್ಥೆ, ಗ್ರಾಂಟ್ ಇನ್ ಏಡ್‌ಗೆ ತರುವ ವ್ಯವಸ್ಥೆ ಸಿಬ್ಬಂದಿ ಕೊಡುವ ವ್ಯವಸ್ಥೆ ಬಗ್ಗೆ, ಸರ್ಕಾರ ತಕ್ಷಣ ನಿರ್ಣಯ ತೆಗೆದುಕೊಳ್ಳಬೇಕು ಎಂದು ನಾವು ಒತ್ತಾಯ ತಂದಿದ್ದೇವೆ. You know the problem.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತಿದ್ದಾರೆ. ವಾಪಸ್ ಬರುವುದಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ. ನಾನು ಹೇಳಿದ್ದಕ್ಕೆ ಮಾನ್ಯತೆ ಕೊಡದೇ ಇದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನು ಹೇಳಿದೆ ತಮಗೆ ಹತ್ತು ನಿಮಿಷ ಜಾಸ್ತಿ ಅವಕಾಶ ಮಾಡಿಕೊಡುತ್ತೇನೆ, ಅದನ್ನು ಪ್ರಸ್ತಾವನೆ ಮಾಡಿ ಎಂದು. ಇಲ್ಲ ನಾನು ಹೀಗೆ ಅಂದರೆ ನನಗೆ ಕಷ್ಟದ ಕೆಲಸ ಆಗುತ್ತದೆ. ಮಾನ್ಯ ಸದಸ್ಯರಿಗೆ ನಾನು ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– (ಭಾವಿಯಲ್ಲಿ ಧರಣಿ ಕುಳಿತು ಮಾತನಾಡುತ್ತಿರುವುದು):– ನಿಮ್ಮ ಬಗ್ಗೆ ವಿರೋಧ ಇಲ್ಲ. ನಿಮ್ಮ ಬಗ್ಗೆ ನಾನು ಗೌರವ ಇಟ್ಟುಕೊಂಡಿದ್ದೇನೆ. ಸರ್ಕಾರದವರು ಗಡಿ ಬಗ್ಗೆ ಕಡೆಗಣಿಸಿದ್ದಾರೆ.

ಅಧ್ಯಕ್ಷರು:– ತಾವು ದಯಮಾಡಿ ಹೇಳಿ. ತಾವು ಮಾತನಾಡುವುದು ಇದ್ದರೆ ಇಲ್ಲಿ ಬಂದು ಮಾತನಾಡಿ.

(ಗೊಂದಲ)

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ಯಾವಾಗಲೂ ಇದೇ ಗಲಾಟೆ ಆಯಿತು. ಭಾವಿಯಲ್ಲಿ ಕುಳಿತು ಮಾತನಾಡಬಾರದು.

ಅಧ್ಯಕ್ಷರು:– ಮಾನ್ಯ ಮಂತ್ರಿಗಳು ತಮಗೆ ಸ್ವಲ್ಪ ಸಮಯಬೇಕೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– ನಾನು ಸಾಯಂಕಾಲ ಉತ್ತರ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಹಾಸನ ಪುರಸಭೆಯಲ್ಲಿ ಬೆಲೆ ಬಾಳುವ ಸೈಟು ಹಾಗೂ ಆಸ್ತಿಗಳ ಪರಭಾರೆಯಲ್ಲಿ ಅವ್ಯವಹಾರ

ಶ್ರೀ ಕೆ.ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷರೆ, ಹಾಸನ ಪುರಸಭೆಯಲ್ಲಿ ಕಳೆದ ಮೂರು ವರ್ಷಗಳಿಂದ ಬೆಲೆ ಬಾಳುವ ಸೈಟು ಹಾಗೂ ಆಸ್ತಿಗಳ ಪರಭಾರೆಯಲ್ಲಿ ಆಗಿರುವ ಲಕ್ಷಾಂತರ ರೂಪಾಯಿ ಅವ್ಯವಹಾರದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಮಂತ್ರಿಗಳು):– (ನಗರಾಭಿವೃದ್ಧಿ ಸಚಿವರ ಪರವಾಗಿ, ಕಾರ್ಮಿಕ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಸನ ಪುರಸಭೆಯಲ್ಲಿ ಕಳೆದ ಮೂರು ವರ್ಷಗಳಿಂದ ಬೆಲೆ ಬಾಳುವ ಸೈಟು ಹಾಗೂ ಆಸ್ತಿಗಳ ಪರಭಾರೆಯಲ್ಲಿ ಆಗಿರುವ ಲಕ್ಷಾಂತರ ರೂಪಾಯಿ ಅವ್ಯವಹಾರದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಹಾಸನ ನಗರಸಭೆಯ ಅಧ್ಯಕ್ಷರು ಹಾಗೂ ಸದಸ್ಯರ ಮೇಲೆ ಆಪಾದನೆಗಳ ಬಗ್ಗೆ ಮಾನ್ಯ ಸದಸ್ಯರು ದಿನಾಂಕ 5.10.92ರಂದು ಸರ್ಕಾರಕ್ಕೆ ಪತ್ರ ಬರೆದು, ಈ ಬಗ್ಗೆ ವಿಚಾರಣೆ ನಡೆಸುವಂತೆ ಕೋರಿದ್ದಾರೆ. ಅವರ ಕೋರಿಕೆಯ

ಅನ್ವಯ ಪೌರಾಡಳಿತ ನಿರ್ದೇಶಕರು ಆಪಾದನೆಗಳ ವಿಚಾರಣೆ ನಡೆಸಿ ತಮ್ಮ ಪತ್ರ ದಿನಾಂಕ 6.1.90 ರಲ್ಲಿ ಆಪಾದನೆಗಳ ಮೇಲೆ ವರದಿಯನ್ನು ಸಲ್ಲಿಸಿದ್ದಾರೆ. ಹಾಸನ ನಗರಸಭೆಯ ಅಧ್ಯಕ್ಷರು ಹಾಗೂ ಚುನಾಯಿತ ಸದಸ್ಯರು ಕಾನೂನು ಬಾಹಿರವಾಗಿ ಹಲವಾರು ನಿರ್ಣಯಗಳನ್ನು ತೆಗೆದುಕೊಂಡದ್ದು ಇದನ್ನು 1964 ರ ಕರ್ನಾಟಕ ಪುರಸಭೆ ಕಾನೂನಿಗೆ ವ್ಯತಿರಿಕ್ತವಾಗಿ ಅವು ಸದರಿ ಕಾಯಿದೆಯ 116 ಪ್ರಕರಣ ಪ್ರಕಾರ ನಗರಸಭೆಯ ಕೌನ್ಸಿಲ್‌ಅನ್ನು ರದ್ದುಪಡಿಸಿ ಸರ್ಕಾರದ ಆಡಳಿತಕ್ಕೆ ಒಳ ವಹಿಸಿಕೊಳ್ಳಬಾರದು ಎಂಬ ಬಗ್ಗೆ ಕಾರಣ ಕೇಳುವ ನೋಟೀಸನ್ನು ದಿನಾಂಕ 5.2.93ರಂದು ಸರ್ಕಾರವ ಹೊರಡಿಸಿದೆ. ಈ ನೋಟೀಸ್ ಪೌರಾಡಳಿತ ನಿರ್ದೇಶಕರ ಮುಖಾಂತರ ಹಾಸನ ನಗರಸಭೆ ಎಲ್ಲ ಸದಸ್ಯರು ಹಾಗೂ ಅಧ್ಯಕ್ಷರಿಗೆ ಕಳಿಸಿಕೊಟ್ಟಿದ್ದು ನೋಟೀಸ್ ಪುನಃ ಹಾಸನ ನಗರಸಭೆ ಆಯುಕ್ತ ಮೂಲಕ ದಿನಾಂಕ 12.2.93 ಮತ್ತು 15.2.93 ರಂದು ನೀಡಲಾಗಿದೆ. ಈ ನೋಟೀಸಿನಲ್ಲಿ ಒಟ್ಟು 17 ಆಪಾದನೆಗಳನ್ನು ನಮೂದಿಸಲಾಗಿದ್ದು ಈ ಆಪಾದನೆಗಳ ಮೇಲೆ ಹೇಳಿಕೆ ಕೊಡುವುದಕ್ಕೆ 30 ದಿವಸಗಳ ಕಾಲಾವಕಾಶ ಕೊಟ್ಟಿದೆ. ಆದರೆ ಇನ್ನೂ ಹೇಳಿಕೆ ಕೊಡಲು ಸಮಯ ಇರುವುದರಿಂದ ಈ ಹಂತದಲ್ಲಿ ಯಾವುದೇ ಕ್ರಮವೂ ಸಾಧ್ಯವಾಗಲಾರದು. ಈ ಆಪಾದನೆಗಳಲ್ಲಿ ಒಂದು ವೇಳೆ ಅಧಿಕಾರ ವರ್ಗದವರು ಭಾಗಿಗಳಾಗಿದ್ದ ಪಕ್ಷದಲ್ಲಿ ಕೆ.ಸಿ.ಎಸ್. ಸಿ.ಪಿ.ಎ., ನಿಯಮಗಳ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಎತ್ತಿರುವ ಪ್ರಶ್ನೆ ಬಹಳ ಮುಖ್ಯವಾಗಿದೆ. ಇದರ ಬಗ್ಗೆ ಪ್ರಸ್ತಾಪಿಸುವುದಕ್ಕೆ ಬೇರೆ ಸಮಯದಲ್ಲಿ ತಾವು ಅವರಿಗೆ ಅವಕಾಶ ಮಾಡಿಕೊಡಬೇಕು. ಈಗ ಸದನದ ಕಾರ್ಯ ಕಲಾಪ ನಡೆಯುತ್ತಿರುವುದರಿಂದ ಭಾವಿಯೊಳಗಿನಿಂದ ಎದ್ದು ಬರಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಗಮನ ಸೆಳೆಯುವ ಸೂಚನೆ ಬಂದಾಗ ನೀವು ಎದ್ದು ನಿಂತುಬಿಟ್ಟಿರಿ. ನಾವು ಕೇಳಿದ ಪ್ರಶ್ನೆಗೆ ಉತ್ತರ ಬೇಡವೆ ? ನಿಮಗೆ ಮಾತ್ರ ಇರಬೇಕು, ನಮಗೆ ಏನು ಬೇಡವೆ ?

ಅಧ್ಯಕ್ಷರು:– ಹನುಮೇಗೌಡರೆ, ತಾವು ಹೀಗೆ ಮಾತನಾಡುವದು ಸರಿಯಲ್ಲ. ತಾವು ಏನು ಮಾತನಾಡುವುದಿದ್ದರೂ ನನ್ನ ಮುಖಾಂತರವೇ ಮಾತನಾಡಬೇಕು. ಈಗ ನಾನು ಪುನಃ ಹೇಳುತ್ತಿದ್ದೇನೆ ಬಜೆಟ್ ಮೇಲೆ ಮಾತನಾಡುವುದಕ್ಕಿಂತ ಮುಂಚಿತವಾಗಿ ಅವರು (ಶ್ರೀ ವಾಟಾಳ್ ನಾಗರಾಜ್‌ರವರ ತಮ್ಮ ವಿಷಯ ಪ್ರಸ್ತಾಪಿಸಲು ನಾನು ಹೆಚ್ಚು ಅವಕಾಶವನ್ನು ಅವರಿಗೆ ಕಲ್ಪಿಸಿಕೊಡುತ್ತೇನೆ. ಅವರು ದಯವಿಟ್ಟು ತಮ್ಮ ಸ್ಥಾನದಲ್ಲಿ ಹೋಗಿ ಕುಳಿತುಕೊಂಡು ಸದನದ ಕಾರ್ಯಕಲಾಪಗಳಿಗೆ ಸಹಕರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ತಾವು ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೀರಿ, ಅಂತೆಯೆ ಈ ಕಡೆಯವರ ಜೊತೆ ತಾವು ತುಂಬಾ ಧಾರಾಳವಾಗಿ ನಡೆಯುತ್ತಿದ್ದೀರಿ, ಇದಕ್ಕಾಗಿ ಧನ್ಯವಾದಗಳು. ಆದರೆ, ಈಗ ಏನಾಗಿದೆಯೆಂದರೆ, ಶೂನ್ಯ ವೇಳೆಯ ವಿಷಯವನ್ನು ಪ್ರಸ್ತಾಪ ಮಾಡಿದರೆ ನಿರ್ದಿಷ್ಟವಾದ ಉತ್ತರ ಸಿಗಬಹುದು, ಗಡಿ ಪ್ರದೇಶದಲ್ಲಿರು ಜನರಿಗೆ ನ್ಯಾಯ ಸಿಗಬಹುದೆನ್ನುವ ಉದ್ದೇಶದಿಂದ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಪ್ರಶ್ನೆ ಎತ್ತಿದ್ದಾರೆಯೆ ವಿನಹ ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ದಯಮಾಡಿ ಬೇರೆ ರೂಪ ಈ ವಿಷಯದ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆಂದು ತಮ್ಮಲ್ಲಿ ವಿ

ಮಾಡಿಕೊಳ್ಳುತ್ತಿದ್ದೇನೆ. ನಾಳೆಯಾದರೂ ಸದರಿ ವಿಷಯವನ್ನು ಪ್ರಸ್ತಾಪಿಸುವುಕ್ಕೆ ಅವಕಾಶ ಮಾಡಿಕೂಡಿ. ಎತ್ತಿರುವ ಪ್ರಶ್ನೆಗೆ ನೇರವಾಗಿ ಉತ್ತರ ಸಿಗಬೇಕು.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ವಾಟಾಳ್ ನಾಗಾರಾಜ್‌ರವರು ಎತ್ತಿರುವ ವಿಷಯ ಬಹಳ ಮುಖ್ಯವಾಗಿದ್ದು, ಗಡಿ ಪ್ರದೇಶಗಳಲ್ಲಿ ಒಳ್ಳೆಯ ಸಮಾಜ ನಿರ್ಮಾಣವಾಗಬೇಕು, ಗಡಿ ಪ್ರದೇಶ ಅಭಿವೃದ್ಧಿಯಾಗಬೇಕು. ಆದರೆ, ಗಡಿ ಪ್ರದೇಶಾಭಿವೃದ್ಧಿ ಮಂಡಳಿಗೆ ಒಂದೂ ಪೈಸೆ ಕೂಡ ಕೊಟ್ಟಿಲ್ಲ, ಮಲೆನಾಡು ಅಭಿವೃದ್ಧಿಮಂಡಳಿ ಎಂದು ರಚನೆ ಮಾಡಿದರು, ಅದಕ್ಕೂ ಕೂಡ ದುಡ್ಡು ಕೊಟ್ಟಿಲ್ಲ, ಅದೇ ರೀತಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಮಂಡಳಿಗೂ ಹಣ ಕೊಟ್ಟಿಲ್ಲ. ಸರ್ಕಾರ ಕಂಗಾಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಈ ಗಡಿ ಸಮಸ್ಯೆಗಳ ಬಗ್ಗೆ ಪ್ರತ್ಯೇಕ ಉತ್ತರ ಕೊಡಿಸುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು:– ನಾನು ಈಗಾಗಲೇ ತಮಗೆ ಹೇಳಿದೆ. ಇದರ ಬಗ್ಗೆ ಮಾತನಾಡುವುದಕ್ಕೆ ಹೆಚ್ಚು ಅವಕಾಶ ಮಾಡಿಕೊಡುತ್ತೇನೆ. ಅಲ್ಲದೆ, ವಿಷಯವನ್ನು ಸರ್ಕಾರಕ್ಕೂ ತಿಳಿಸಿ ಸ್ಪೆಸಿಫಿಕ್ ಉತ್ತರ ಕೊಡಬೇಕೆಂದು ಸಹ ಹೇಳಿದ್ದೇನೆ. ಹೀಗಿದ್ದರೂ ನಾನು ಹೀಗೆಯೇ ಮಾಡುತ್ತೇನೆಂದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್:– ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬಹಳ ಮಹತ್ವವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಇದರ ಬಗ್ಗೆ ಸ್ಪಷ್ಟೀಕರಣ ಕೊಡಿಸಿಕೊಡುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸಚಿವರ ಆಶ್ವಾಸನೆ ಮೇರೆಗೆ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಭಾವಿಯಿಂದ ಎದ್ದು ತಮ್ಮ ಪೀಠಕ್ಕೆ ಹೋಗಿ ಆಸೀನರಾದರು)

ಅಧ್ಯಕ್ಷರು:– ನಾನು ಈ ಕಡೆ ಕುಳಿತಿರುವ ಸದಸ್ಯರಿಗೆ ಕೇಳಿಕೊಳ್ಳುವುದೇನೆಂದರೆ, ನನ್ನ ಅನಿಸಿಕೆ ಮೇರೆಗೆ ತಮ್ಮ ಮಾತುಕತೆಗಳನ್ನು ಸದನದಲ್ಲಿ ದಯವಿಟ್ಟು ಕಡಿಮೆ ಮಾಡಬೇಕು. ಒಂದು ವೇಳೆ ಮಾತನಾಡುವ ಅವಶ್ಯಕತೆಯಿದ್ದರೆ ಮತ್ತೊಬ್ಬರಿಗೆ ಕೇಳದಂತೆ ಮಾತನಾಡಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ, ತಾವು ಆಡುವ ಮಾತುಗಳು ನನ್ನವರೆಗೂ ಬರುವುದರಿಂದ ಕಲಾಪಕ್ಕೆ ಸ್ವಲ್ಪ ತೊಂದರೆಯುಂಟಾಗುತ್ತದೆ. ಮಂತ್ರಿಗಳಾದಿಯಾಗಿ ಎಲ್ಲಾ ಸದಸ್ಯರಿಗೂ ನಾನು ಕೇಳಿಕೊಳ್ಳುವುದೇನೆಂದರೆ, ತಾವುಗಳು ಮಾತನಾಡಿ ನಾನು ಬೇಡವೆಂದು ಹೇಳುವುದಿಲ್ಲ, ಮಾತನಾಡುವಾಗ ಕಿವಿಯ ಬಳಿ ಮಾತನಾಡಿದರೆ ಉತ್ತಮ. ಏಕೆಂದರೆ, ತಾವಾಡುವ ಮಾತುಗಳು ನನಗೆ ಕೇಳಿಸುವುದರಿಂದ ಕಲಾಪ ನಡೆಸಲು ಕಷ್ಟವಾಗುತ್ತದೆ. ಆದುದರಿಂದ, ಮಾತುಗಳನ್ನು ಕಡಿಮೆ ಮಾಡಿ, ಸಭೆಯ ಕಲಾಪಗಳನ್ನು ಆಲಿಸಿ ಎಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಸನ್ಮಾನ್ಯ ಅಧ್ಯಕ್ಷರೆ, ಖಾಸಗಿಯವರಿಗೆ ಮುನಿಸಿಪಾಲಿಟಿಯವರು ನಿವೇಶನಗಳನ್ನು ಮಂಜೂರು ಮಾಡಬೇಕಾದರೆ ಯಾವ ಕ್ರಮವನ್ನು ಅನುಸರಿಸುತ್ತಾರೆ ? ಎನ್ನುವುದರ ಬಗ್ಗೆ ಮಂತ್ರಿಗಳು ವಿವರ ಕೊಡುತ್ತಾರೆಯೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಮಾತನ್ನು ಸರ್ಕಾರ ಆಲಿಸಿತು ಎನ್ನುತ್ತೀರಾ ? ಆಡಳಿತ ಪಕ್ಷದ ಒಬ್ಬ ಪ್ರಮುಖ ಸದಸ್ಯರು ಇಂತಹ ಪ್ರಮುಖ ವಿಷಯವನ್ನು ಪ್ರಸ್ತಾಪಿಸಿದಾಗ ಯಾರೂ ಆಲಿಸಿಲ್ಲವೆಂದರೆ ನಮಗಂತೂ ಈ ಸರ್ಕಾರ ಬದುಕಿದೆಯೆ ? ಸತ್ತಿದೆಯೆ ? ಒಂದೂ ಅರ್ಥವಾಗುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:– ಸದನದಲ್ಲಿ ಈಗ ನಗರಾಭಿವೃದ್ಧಿ ಮಂತ್ರಿಗಳು ಇಲ್ಲ. ಅವರು ಕೊಟ್ಟ ಹೇಳಿಕೆಯನ್ನು ಮಾನ್ಯ ಕಾರ್ಮಿಕ ಸಚಿವರು ಓದಿದರು.

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೆ, ನಾವು ಪ್ರಶ್ನೆ ಕೇಳುವಾಗ ಅವರುಗಳು ಗಲಾಟೆ ಮಾಡುತ್ತಾರೆ, ಆದ್ದರಿಂದ ಮುಂದೆ ಶ್ರೀ ವಾಟಾಳ್ ನಾಗರಾಜ್‌ರವರು ಏನಾದರೂ ಪ್ರಶ್ನೆ ಕೇಳುವಾಗ ನಮಗೆ ಗಲಾಟೆ ಮಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರೆ ಖಾಸಗಿಯವರಿಗೆ ಮುನಿಸಿಪಾಲಿಟಿಯವರು ಸೈಟುಗಳನ್ನು ಮಂಜೂರು ಮಾಡುವಾಗ ಕಾನೂನಿನ ಪ್ರಕಾರ ಏನು ಕ್ರಮವನ್ನು ಅನುಸರಿಸಬೇಕು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಭೀಮಣ್ಣ ಖಂಡ್ರೆ:– ಅವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಉತ್ತರವನ್ನು ಮಂತ್ರಿಗಳು ಕೊಟ್ಟಿದ್ದಾರೆ. ಅವರು ಈಗ ಬೇರೆ ವಿಶೇಷವಾಗಿ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಮೊದಲು ನೋಟೀಸ್ ಕೊಡಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ:– ನಿಮಗೆ ಗೊತ್ತಿದ್ದರೆ ಹೇಳಿ, ಇಲ್ಲದಿದ್ದರೆ ಸುಮ್ಮನಿರಿ. ಸಾವಿರಾರು ಸೈಟುಗಳನ್ನು ಬೇರೆಯವರಿಗೆ ಮುನಿಸಿಪಾಲಿಟಿಯವರು ಕಾನೂನಿಗೆ ವಿರುದ್ಧವಾಗಿ ಪರಭಾರೆ ಮಾಡಿದ್ದಾರೆಂದು ನನ್ನ ಪ್ರಶ್ನೆ, ಇದರ ಬಗ್ಗೆ ನಿಮಗೆ ನೋಟೀಸ್ ಏಕೆ ಕೊಡಬೇಕು ?

ಶ್ರೀ ಭೀಮಣ್ಣ ಖಂಡ್ರೆ:– ಕಾಲಿಂಗ್ ಅಟೆನ್‌ಷೆನ್‌ನಲ್ಲಿ ಯಾವ ವಿಷಯವಿದೆ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಈಗ ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಕೇಳಬೇಕಾದರೆ ನೋಟೀಸ್ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ, ಅಧ್ಯಕ್ಷರೆ ಅದನ್ನು ಮುಂದಕ್ಕೆ ಹಾಕಿ.

ಶ್ರೀ ಕೆ.ಹೆಚ್. ಹನುಮೇಗೌಡ:– ಹಾಗಾದರೆ ಮುಂದೆ ಹಾಕಿ, ಅವರು ಬಂದ ಮೇಲೆ ಇದಕ್ಕೆ ಉತ್ತರ ಹೇಳಿ.

ಶ್ರೀ ಆಂಜನಮೂರ್ತಿ:– ಮಾನ್ಯ ಅಧ್ಯಕ್ಷರೆ, ಸರ್ಕಾರಿ ಅನುಸೂಚಿತ ಜಾತಿ:ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಡಿಗೆಯವರು ಮತ್ತು 'ಡಿ' ದರ್ಜೆಯ ಸಿಬ್ಬಂದಿಗೆ ಸಿಗುತ್ತಿರುವ ಸೌಲಭ್ಯಗಳು. ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇವೆ.

ಶ್ರೀ ಧರ್ಮಸಿಂಗ್:– (ಸಮಾಜ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಖಾಸಗಿ ಆಡಳಿತ ಸಂಸ್ಥೆಯವರು ನಡೆಸುವ ವಿದ್ಯಾರ್ಥಿ ನಿಲಯಗಳನ್ನು ಪ್ರೋತ್ಸಾಹಿಸಲು ಅನುದಾನವನ್ನು ಒದಗಿಸುತ್ತಿದೆ. ಈ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ, ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಸಮಾನವಾಗಿ ಭೋಜನ ವೆಚ್ಚವನ್ನು ಇಲಾಖೆಯು ನೀಡುತ್ತಿದೆ. ಸಿಬ್ಬಂದಿ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಗಳು ಭರಿಸಬೇಕಾಗಿದ್ದು, ಸರ್ಕಾರದ ವತಿಯಿಂದ ಪೂರಕ ಅನುದಾನವನ್ನು ಮಾತ್ರ ಸಿಬ್ಬಂದಿ ವೆಚ್ಚಕ್ಕಾಗಿ ನೀಡಲಾಗುತ್ತಿದೆ. ಸರ್ಕಾರದ ಆದೇಶದ ಸಂಖ್ಯೆ. ಎಸ್‌ಡಬ್ಲ್ಯುಡಿ 248 ಎಸ್‌ಬಿಸಿ 71, ದಿನಾಂಕ 20-12-1977ರ ಪ್ರಕಾರ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ನೀಡುವ ಸಿಬ್ಬಂದಿ ವೆಚ್ಚದ ವಿವರ ಕೆಳಕಂಡಂತಿದೆ.

1)	ಮೇಲ್ವಿಚಾರಕರಿಗೆ	ತಿಂಗಳಿಗೆ – ರೂ. 125
2)	ಅಡಿಗೆಯವರು	ತಿಂಗಳಿಗೆ – ರೂ. 100
3)	ಅಡಿಗೆ ಸಹಾಯಕರು	ತಿಂಗಳಿಗೆ – ರೂ. 75